ಕರ್ನಾಟಕವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1543
ಸದಸ್ಯರ ಹೆಸರು	:	ಶ್ರೀ. ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ಸಚಿವರು	:	ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.
ಉತ್ತರಿಸುವ ದಿನಾಂಕ	:	11.03.2022.

ಕ್ರ. ಸಂ	ಪ್ರಶ್ನೆ	ಉತ್ತರ
1.	ರಾಜ್ಯದಲ್ಲಿ ಕೇಂದ್ರ ಸರ್ಕಾರ ಸ್ವಾಮ್ಯದ ತೆಂಗು ಅಭಿವೃದ್ಧಿ ಮಂಡಳಿಯ ವಿಭಾಗೀಯ ಕಛೇರಿಯನ್ನು ಯಾವ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ;	ರಾಜ್ಯದಲ್ಲಿ ಕೇಂದ್ರ ಸರ್ಕಾರ ಸ್ವಾಮ್ಯದ ತೆಂಗು ಅಭಿವೃದ್ಧಿ ಮಂಡಳಿಯ ಪ್ರಾದೇಶಿಕ ಕಛೇರಿಯನ್ನು ಬೆಂಗಳೂರಿನ ಹುಳಿಮಾವಿನಲ್ಲಿ ಸ್ಥಾಪಿಸಲಾಗಿರುತ್ತದೆ.
2.	ಈ ಮಂಡಳಿಯ ವತಿಯಿಂದ ರಾಜ್ಯದಲ್ಲಿ ತೆಂಗು ಬೆಳೆಯುವ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಜಿಲ್ಲೆಗಳ ತೆಂಗು ಅಭಿವೃದ್ಧಿಗೆ ಕೈಗೊಂಡಿರುವ ಯೋಜನೆಗಳಾವುವು; ಮತ್ತು ಈ ಯೋಜನೆಗಳಡಿಯಲ್ಲಿ ಬೆಳೆಗಾರರಿಗೆ ಫಸಲ್ ಭೀಮಾ ಯೋಜನೆಯ ನ್ನೊಳಗೊಂಡಂತೆ ದೊರೆಯುತ್ತಿರುವ ಸೌಲಭ್ಯಗಳೇನು; (ಜಿಲ್ಲಾವಾರು ವಿವರ ನೀಡುವುದು)	ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ರಾಜ್ಯದಲ್ಲಿ ತೆಂಗು ಬೆಳೆಯುವ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಜಿಲ್ಲೆಗಳಲ್ಲಿ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗಿರುತ್ತದೆ. • ತೆಂಗು ಮರುನಾಟಿ ಹಾಗೂ ಪುನಃಶ್ಚೇತನ ಕಾರ್ಯಕ್ರಮ. • ತೆಂಗು ಪ್ರದೇಶ ವಿಸ್ತರಣೆ ಕಾರ್ಯಕ್ರಮ. • ಪ್ರಾತ್ಯಕ್ಷಿತೆ ತಾಕುಗಳ ನಿರ್ಮಾಣ ಕಾರ್ಯಕ್ರಮ. • ಕ್ಷೇತ್ರೀಯ ತೆಂಗು ನರ್ಸರಿ ಕಾರ್ಯಕ್ರಮ. • ಕೇರಾ ಸುರಕ್ಷಾ ವಿಮಾ ಯೋಜನೆ. • ತೆಂಗು ನರ್ಸರಿ ನಿರ್ಮಾಣ ಕಾರ್ಯಕ್ರಮ. • ತೆಂಗು ಬೆಳೆಗಾರರಿಗೆ ತರಬೇತಿ ಕಾರ್ಯಕ್ರಮ. ಈ ಯೋಜನೆಗಳಡಿಯಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ. • ತೆಂಗು ಮರುನಾಟಿ ಹಾಗೂ ಪುನಃಶ್ಚೇತನ ಕಾರ್ಯಕ್ರಮದಡಿಯಲ್ಲಿ ಕಡಿಮ ಇಳುವರಿ ನೀಡುವ/ ಸಂಪೂರ್ಣ ಒಣಗಿರುವ/ ಹಳೆಯ/ ಕೀಟ/ ರೋಗಬಾಧಿತ ತೆಂಗಿನ ಗಿಡಗಳನ್ನು ತೆಗೆದು ಅಧಿಕ ಇಳುವರಿ ನೀಡುವ ಹೈಬ್ರಿಡ್ / ಗಿಡ್ಡ / ಎತ್ತರದ ತಳಿಗಳನ್ನು ನಾಟಿಮಾಡಿ, ಹಳೆಯ ಗಿಡಗಳಿಗೆ ತೇವಾಂಶ ಸಂರಕ್ಷಣೆ ಹಾಗೂ ಸಮಗ್ರ ಪೋಷಕಾಂಶಗಳ ನಿರ್ವಹಣೆಗಾಗಿ ಎರಡು ವರ್ಷಗಳ ಅವಧಿಗೆ ಪ್ರತಿ ಹೆಕ್ಟೇರ್ ಗೆ ರೂ53,500/- ಗಳ ಸಹಾಯಧನವನ್ನು

		1ಹೆಕ್ಟೇರ್‌ವರೆಗೆ ನೀಡಲಾಗುತ್ತಿದೆ. • ತೆಂಗಿನ ತೋಟಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿಯಲ್ಲಿ ಎತ್ತರ / ಗಿಡ್ಡ / ಸಂಕರಣ ತಳಿಗಳ ಘಟಕ ವೆಚ್ಚದ ಶೇ.25%ರಂತೆ ಗರಿಷ್ಟ 4 ಹೆಕ್ಟೇರ್ ವರೆಗೆ ಪ್ರತಿಫಲಾನುಭವಿಗೆ ಆರ್ಥಿಕ ಸವಲತ್ತನ್ನು ನೀಡಲಾಗುತ್ತಿದೆ. • ತೆಂಗು ನರ್ಸರಿ ನಿರ್ಮಾಣ ಕಾರ್ಯಕ್ರಮದಡಿಯಲ್ಲಿ ತೆಂಗಿನ ಸಸಿಗಳ ಉತ್ಪಾದನೆಗಾಗಿ ಪ್ರತಿಫಲಾನುಭವಿಗೆ ಘಟಕ ವೆಚ್ಚದ ಶೇ.25% ರಂತೆ ಗರಿಷ್ಟ 0.4 ಹೆಕ್ಟೇರ್ ವರೆಗೆ ಆರ್ಥಿಕ ಸವಲತ್ತನ್ನು ನೀಡಲಾಗುತ್ತಿದೆ. • ಕೇರಾ ಸುರಕ್ಷಾ ವಿಮಾ ಯೋಜನೆಯಡಿಯಲ್ಲಿ ನೊಂದಾಯಿಸಲಾದ ತೆಂಗು ಬೆಳೆಗಾರರಿಗೆ ಅಪಘಾತವಾದಲ್ಲಿ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತದೆ. • ರಾಜ್ಯದಲ್ಲಿ ತೆಂಗು ಬೆಳೆಯನ್ನು ಪ್ರಧಾನ ಮಂತ್ರಿ ಫಸಲ್‌ಭೀಮಾ ಯೋಜನೆಯಡಿಯಲ್ಲಿ ಒಳಪಡಿಸಿರುವುದಿಲ್ಲ. ಮೇಲ್ಕಂಡ ಎಲ್ಲಾ ಸೌಲಭ್ಯಗಳನ್ನು ತೆಂಗು ಬೆಳೆಯುವ ಪ್ರಮುಖ ಜಿಲ್ಲೆಗಳಾದ ತುಮಕೂರು, ದಾವಣಗೆರೆ, ಶಿವಮೊಗ್ಗ, ರಾಮನಗರ, ಮಂಡ್ಯ, ಚಿತ್ರದುರ್ಗ, ಉತ್ತರಕನ್ನಡ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣಕನ್ನಡ ,ಹಾಸನ, ಮೈಸೂರು, ಉಡುಪಿ ಜಿಲ್ಲೆಗಳ ತೆಂಗು ಬೆಳೆಗಾರರಿಗೆ ನೀಡಲಾಗುತ್ತಿದೆ.
3.	ರಾಜ್ಯದಲ್ಲಿ ಈ ಮಂಡಳಿ ವತಿಯಿಂದ ತೆಂಗಿನ ನಾರು ಮುಂತಾದ ಉಪಯುಕ್ತ - ಉಪ ಉತ್ಪನ್ನಗಳಿಂದ ತಯಾರಿಸಲಾಗುವ ಉತ್ಪನ್ನಗಳಿಗೆ ಬೆಂಬಲ ನೀಡಲು ಮಂಡಳಿಯು ರೂಪಿಸಿರುವ ಯೋಜನೆಗಳಾವುವು; ಮತ್ತು ರಾಜ್ಯದಲ್ಲಿ ಈ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆಯೇ?	ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ತೆಂಗಿನನಾರು ಮತ್ತು ನಾರಿನ ಉಪಯುಕ್ತ - ಉಪ ಉತ್ಪನ್ನಗಳಿಂದ ತಯಾರಿಸಲಾಗುವ ಉತ್ಪನ್ನಗಳಿಗೆ ಬೆಂಬಲ ನೀಡುವ ಯೋಜನೆಗಳಿರುವುದಿಲ್ಲ.

HORTI 145 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು